1	2	3	4	5
12.	ಧಾರವಾಡ	9.86	34.53	37.00
13.	ಗದಗ	12.49	32.03	31.33
14.	ಗುಲ್ಬರ್ಗಾ	6.88	20.77	20.53
15.	ಹಾಸನ	11.50	21.16	20.83
16.	ಹಾವೇರಿ	22.55	27.74	30.95
17.	ಉತ್ತರ ಕನ್ನಡ	8.39	12.54	13.50
18.	ಕೋಲಾರ	13.52	29.19	32.76
19.	ಕೊಪ್ಪಳ	8.15	18.09	22.37
20.	ಮಂಡ್ಯ	9.38	16.79	19.45
21.	ದಕ್ಷಿಣ ಕನ್ನಡ	8.13	11.79	34.52
22.	ಕೊಡಗು	9.17	16.93	17.06
23.	ಮೈಸೂರು	9.67	19.02	21.36
24.	ರಾಯಚೂರು	5.46	14.09	11.30
25.	ಶಿವಮೊಗ್ಗ	7.91	15.45	16.68
26.	ತುಮಕೂರು	13.50	23.65	30.95
27.	ಉಡುಪಿ	8.4	12.12	16.10

ರಾಜ್ಯದಲ್ಲಿರುವ ಹಾಲು ಒಕ್ಕೂಟಗಳಿಂದ ಹಾಲಿನ ಬೆಲೆ ಏರಿಕೆ

3631(4353) ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಹಾಲು ಉತ್ಪಾದಕರ ಒಕ್ಕೂಟಗಳಿಂದ ಉತ್ಪಾದಕರಿಗೆ ಹಾಲಿನ ಬೆಲೆಯನ್ನು ಏರಿಸಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ;

ಆ) ವಿವಿಧ ಒಕ್ಕೂಟಗಳ ಉತ್ಪಾದಕರಿಗೆ ಹಾಲಿ ನೀಡುತ್ತಿರುವ ಲೀಟರ್‌ನ ಬೆಲೆ ಎಷ್ಟು;

ಇ) ಹಾಗಿದ್ದರೆ ಬೆಲೆ ಏರಿಸಲು ಸರ್ಕಾರವೇನಾದರೂ ತೀರ್ಮಾನ ತೆಗೆದುಕೊಂಡಿದೆಯೇ;

ಈ) ಯಾವ ಯಾವ ಹಾಲು ಒಕ್ಕೂಟಗಳು ಲಾಭದಾಯಕದಲ್ಲಿದೆ ಮತ್ತು ನಷ್ಟದಲ್ಲಿದೆ; ಅಂಕಿ ಅಂಶಗಳೊಂದಿಗೆ ವಿವರ ಒದಗಿಸುವುದು?

ಶ್ರೀ ಎಂ. ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಕೆಲವು ಹಾಲು ಒಕ್ಕೂಟಗಳ ಅಧ್ಯಕ್ಷರುಗಳು ಹಾಲು ಕೊಳ್ಳುವ ದರವನ್ನು ಹೆಚ್ಚಿಸುವ ಸಲುವಾಗಿ ಹಾಲು ಮಾರಾಟ ದರವನ್ನು ಹೆಚ್ಚಿಸಲು ಮನವಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಆ) ವಿವರಗಳನ್ನು ಅನುಬಂಧ–I ರಲ್ಲಿ ನೀಡಲಾಗಿದೆ.

ಇ) ಹಾಲು ಉತ್ಪಾಕದರಿಂದ ಕೊಳ್ಳುವ ದರವನ್ನು ಹಾಲು ಒಕ್ಕೂಟಗಳೇ ನಿರ್ಧರಿಸುತ್ತಾರೆ. ಕೊಳ್ಳುವ ದರ ನಿರ್ಧರಿಸುವಲ್ಲಿ ಹಾಲು ಒಕ್ಕೂಟಗಳಿಗೆ ಸ್ವಾಯತ್ತತೆ ಇರುತ್ತದೆ. ಸರ್ಕಾರ ಯಾವ ನಿರ್ಧಾರವನ್ನು ತೆಗೆದುಕೊಂಡಿರುವುದಿಲ್ಲ.

ಈ) ವಿವರಗಳನ್ನು ಅನುಬಂಧ–II ರಲ್ಲಿ ನೀಡಲಾಗಿದೆ.

ಅನುಬಂಧ- 1

ವಿವಿಧ ಹಾಲು ಒಕ್ಕೂಟಗಳು ಉತ್ಪಾದಕರಿಗೆ ಹಾಲಿ ಒಂದು ಲೀಟರ್‌ಗೆ ನೀಡುತ್ತಿರುವ ಬೆಲೆಗಳ ವಿವರ:

ಕ್ರಮ ಸಂಖ್ಯೆ	ಒಕ್ಕೂಟದ ಹೆಸರು	ಹಾಲು ಒಕ್ಕೂಟಗಳು ಸಂಘಗಳಿಗೆ ನೀಡುತ್ತಿರುವ ಹಾಲಿನ ದರ ಪ್ರತಿ ಲೀಟರ್‌ಗೆ ರೂ	ಹಾಲುಸಂಘ ಉತ್ಪಾದಕರಿಗೆ ನೀಡುತ್ತಿರುವ ಲೀಟರ್ ದರ ರೂ.
1	2	3	4
1.	ಬೆಂಗಳೂರು	9.20	8.70
2.	ಕೋಲಾರ	8.94	8.50
3.	ಮೈಸೂರು	8.54	8.05
4.	ತುಮಕೂರು	8.61	8.00
5.	ಹಾಸನ	8.45	8.10
6.	ಶಿವಮೊಗ್ಗ	8.65	8.15
7.	ಮಂಗಳೂರು	10.04	9.50
8.	ಮಂಡ್ಯ	8.50	8.10
9.	ಬಿಜಾಪುರ	8.04	7.56
	ಎಮ್ಮೆ ಹಾಲಿಗೆ	10.51	10.10
10.	ಧಾರವಾಡ	8.24	7.80
	ಎಮ್ಮೆ ಹಾಲಿಗೆ	10.51	10.60
11.	ಬೆಳಗಾಂ	8.24	7.80
	ಎಮ್ಮೆ ಹಾಲಿಗೆ	11.12	10.60
12.	ಬಳ್ಳಾರಿ	8.04	7.60
	ಎಮ್ಮೆ ಹಾಲಿಗೆ	10.51	8.90
13.	ಗುಲ್ಬರ್ಗಾ	8.45	7.90
	ಎಮ್ಮೆ ಹಾಲಿಗೆ	10.51	9.90

ಅನುಬಂಧ –II

ಹಾಲು ಒಕ್ಕೂಟಗಳ ಲಾಭ ನಷ್ಟದ ವಿವರ

ಕ್ರಮ ಸಂಖ್ಯೆ	ಒಕ್ಕೂಟದ ಹೆಸರು	2002–03ನೇ ಸಾಲಿನ ಲಾಭ:ನಷ್ಟದ (ತಾತ್ಕಾಲಿಕ) ವಿವರ (ಲಕ್ಷಗಳಲ್ಲಿ)	
		ಲಾಭ	ನಷ್ಟ
1	2	3	4
1.	ಬೆಂಗಳೂರು	225.22	
2.	ಕೋಲಾರ	10.50	

1	2	3	4
3.	ಮೈಸೂರು	178.25	
4.	ಮಂಡ್ಯ	117.60	
5.	ಧಾರವಾಡ	28.49	
6.	ಬೆಳಗಾಂ	24.84	
7.	ಹಾಸನ	96.00	
8.	ತುಮಕೂರು	74.15	
9.	ದಕ್ಷಿಣ ಕನ್ನಡ	43.84	
10.	ಶಿವಮೊಗ್ಗ	12.30	
11.	ಗುಲ್ಬರ್ಗಾ	–	46.89
12.	ಬಿಜಾಪುರ	–	41.01
13.	ಬಳ್ಳಾರಿ	32.46	

ರಾಷ್ಟ್ರದ ರೇಷ್ಮೆ ಬೆಳೆಗಾರರ ಅಭಿವೃದ್ಧಿ

3632(4354) ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಷ್ಟ್ರದ ರೇಷ್ಮೆ ಬೆಳೆಗಾರರ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;

ಇ) ಈ ಹಣದಲ್ಲಿ ಕೈಗೊಂಡಿರುವ ರೇಷ್ಮೆ ಬೆಳೆಗಾರರ ಅಭಿವೃದ್ಧಿ ಕಾರ್ಯಕ್ರಮಗಳು ಯಾವುವು; ವಿವರವಾಗಿ ತಿಳಿಸುವುದು;

ಈ) ರಾಷ್ಟ್ರದ ರೇಷ್ಮೆ ಬೆಳೆಗಾರರಿಗೆ ನೀಡಲಾಗುತ್ತಿರುವ ಧನಸಹಾಯದ ಪ್ರಮಾಣವೆಷ್ಟು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ಬಂದಿದೆ.

ಆ) ಕೇಂದ್ರ ರೇಷ್ಮೆ ಮಂಡಳಿಯ ಸಹಭಾಗಿತ್ವದ ಕೆಟಲಿಟಿಕ್ ಅಭಿವೃದ್ಧಿ ಕಾರ್ಯಕ್ರಮಗಳಡಿ ರೂ. 1296.47 ಲಕ್ಷ ಹಾಗೂ ರೇಷ್ಮೆ ಗೂಡಿಗೆ ಪ್ರೋತ್ಸಾಹಧನ ನೀಡುವ ಕಾರ್ಯಕ್ರಮದಡಿ ರೂ. 576.00 ಲಕ್ಷಗಳನ್ನು ಬಿಡುಗಡೆ ಮಾಡಿದೆ.

ಇ) ಈ ಕೆಳಗಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ:–

1) ಹಿಪ್ಪುನೇರಳೆ ತೋಟಕ್ಕೆ ಹನಿ ನೀರಾವರಿ ಅಳವಡಣೆಗೆ ಸಹಾಯಧನ ನೀಡುವುದು.

2) ಪ್ರತ್ಯೇಕ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಸಹಾಯಧನ ನೀಡುವುದು.

3) ಹೊಸ ಹಿಪ್ಪುನೇರಳೆ ತಳಿ ಅಭಿವೃದ್ಧಿಗೆ ಪ್ರೋತ್ಸಾಹಧನ ನೀಡುವುದು.

4) ಚಾಕಿ ಸಾಕಾಣಿಕೆ ಕಟ್ಟಡಗಳ ನಿರ್ಮಾಣಕ್ಕೆ ಮತ್ತು ಚಾಕಿ ಸಾಕಾಣಿಕೆ ಸಲಕರಣೆಗಳಿಗೆ ಸಹಾಯಧನ ನೀಡುವುದು.

5) ರೇಷ್ಮೆ ಬೆಳೆಗಾರರಿಗೆ ತರಬೇತಿ ಮತ್ತು ಕಿಟ್ ಸರಬರಾಜು ಮಾಡುವುದು.